ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 98/2023

| | | |
|---|---|---|
| ಹೆಸರು | - | ಮನೀಷ |
| ತಂದೆಯ ಹೆಸರು | - | ಅಶೋಕ ಹರಿಕಾಂತ |
| ವಯಸ್ಸು | - | 38 ವರ್ಷ |
| ಉದ್ಯೋಗ | - | ರೈತ ವ ಬಿಸಿನೆಸ್ |
| ವಾಸ್ತವ್ಯ | - | ಕುರಿಗದ್ದೆ, ಬರ್ಗಿ, ಕುಮಟಾ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ –

ಪ್ರಶ್ನೆ - 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದುಕೊಂಡಿದ್ದೀರಾ?

ಉತ್ತರ -

**ಪ್ರಶ್ನೆ - 2** ಪಿ ಡಬ್ಲ್ಯೂ 1 - ನವೀನಕುಮಾರ ಆರ್ ನಾಯ್ಕ, ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಹಾಗೂ ಕೇಶವ ಸುಬ್ರಾಯ ನಾಯ್ಕ , ಪ್ರಮೋದ ಪಾಂಡುರಂಗ ಹರಿಕಾಂತ ಸೇರಿಕೊಂಡು ಅವರ ಸಹಕಾರಿಗೆ ಭೇಟಿ ನೀಡಿ ನೀವು ನಿಮ್ಮ ವೈಯಕ್ತಿಕ ಅಡಚಣೆಯ ಕುರಿತು ರೂ . 35,000/- ಗಳನ್ನು ಸಾಲವಾಗಿ ನೀಡಿರಿ ಅಂತಾ ಸಾಲದ ಅರ್ಜಿ ಸಲ್ಲಿಸಿದಂತೆ ಅವರ ಸಹಕಾರಿಯವರು ಸದ್ರಿ ಸಾಲದ ಅರ್ಜಿಯನ್ನು ಪರಿಶೀಲಿಸಿ ನಿಮಗೆ ಸಾಲದ ಖಾತೆ ನಂ . 1010000748 ನೇದರಂತೆ ಸಾಲ ಎಂತಾ ರೂ. 35,000/- ಗಳನ್ನು ದಿಃ 31-03-2020 ರಂದು ಸಾಲಗಾಗಿ ನೀಡಿದಂತೆ ನೀವು ಸಾಲವಾಗಿ ಪಡೆದಿದ್ದು ಸದರ ಸಾಲಕ್ಕೆ ಕೇಶವ ಸುಬ್ರಾಯ ನಾಯ್ಕ ಪ್ರಮೋದ ಪಾಂಡುರಂಗ ಹರಿಕಾಂತ ಜಾಮೀನುದಾರರಾದದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ – 3** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಸಾಲ ಪಡೆಯುವ ಕಾಲಕ್ಕೆ ಸಾಲಗಾರ ವ ಜಾಮೀನುದಾರರು ಅವರ ಸಹಕಾರಿಗೆ ಸಾಲದ ಕರಾರು ಪತ್ರ, ವಚನ ಪತ್ರ ವಗೈರೆ ದಾಖಲೆಗಳನ್ನು ಬರೆಸಿಕೊಟ್ಟು ಸಾಲ ಪಡೆದಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ – 4** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದ್ರಿ ಸಾಲವು ಸಿಂಗಲ್ ಡಿಪಾಲ್ಟ ಕ್ಲಾಸ್ ಸಾಲವಾಗಿರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ – 5** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಹೀಗಿರುವಾಗ ಸಾಲವನ್ನು ಮರುಪಾವತಿ ಮಾಡಲು ಸಾಲಗಾರರು ವ ಜಾಮೀನುದಾರರು ವಯಕ್ತಿಕವಾಗಿ ವ ಸಾಮೂಹಿಕವಾಗಿ ಜವಾಬುದಾರರಾಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ – 6** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಹೀಗಿರುವಲ್ಲಿ ಸದ್ರಿ ಸಾಲದ ರಖಂನ್ನು ಸಾಲಗಾರರು ವ ಜಾಮೀನುದಾರರು ಮಾತಿನಂತೆ ವ ದಾಖಲೆಗಳಂತೆ ಸಕಾಲದಲ್ಲಿ ವಸೂಲ ಕೊಡದೇ ಇದ್ದರಿಂದ ಸದ್ರಿ ಸಾಲವು ಕಟಬಾಕೀಯಾಗಿದ್ದರಿಂದ ಅವರ ಸಹಕಾರಿಯವರು ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ಹಲವಾರು ಸಲ ಭೇಟಿಯಾಗಿ ಸದರ ಸಾಲದ ಕುರಿತು ಅವರ ಸಹಕಾರಿಗೆ ವಸೂಲ ಬರತಕ್ಕ ಬಾಕೀ ಇದ್ದಂತಹ ರಖಂನ್ನು ಬಡ್ಡಿ ಸಹಿತ ಪೂರ್ತಿಯಾಗಿ ವಸೂಲ ಕೊಡುವರೇ ಲೇಖಿಯಾಗಿ ವ ಮೌಖಿಕವಾಗಿ ವಿನಂತಿಸಿದಾಗ್ಯೂ ಸಹ ಸಾಲದ ರಖಂನ್ನು ವಸೂಲ ಕೊಟ್ಟಿದ್ದು ಇರುವುದಿಲ್ಲಾ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ – 7** ಪಿ ಡಬ್ಲ್ಯೂ 1 – ಇವರು ಮುಂದುವರಿದು , ತದನಂತರ ಅವರ ಸಹಕಾರಿಯವರು ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ಭೇಟಿಯಾಗಿ ಸಾಲದ ರಖಂನ್ನು ವಸೂಲ ನೀಡುವಂತೆ ವಿನಂತಿಸಿಕೊಂಡಾಗ ನೀವು ದಿಃ 19-04-2021 ರಂದು ಅವರ ಸಹಕಾರಿಗೆ ಬಂದು ಸಾಲದ ಕುರಿತು ರೂ. 19-04-2021/- ಇದ್ದಂತೆ ಸಾಲದ ರಖಂ ಪೈಕಿ ಸಾಲದ ಅಸಲು ರಖಂ ರೂ. 35,000/- ಬಡ್ಡಿ ರೂ. 6996/ ವಿಸಿಟಿಂಗ್ ಚಾರ್ಜ ರೂ. 2000/- ನೋಟಿಸು ಚಾರ್ಜ ರೂ. 1000/- ಇತರೇ ರೂ. 2000/- ಅಂತೂ ರೂ. 46,996/- ಗಳನ್ನು ತಾನು ಮರುಪಾವತಿ ಮಾಡುತ್ತೇನೆ ಆದರೆ ಸದರ ರಖಂನ್ನು ಮರುಪಾವತಿ ಮಾಡುವರೇ ಈಗ ತನ್ನ ಹತ್ತಿರ ಕೈಯಲ್ಲಿ ನಗದಾಗಿ ಹಣವಿಲ್ಲ , ಆದ್ದರಿಂದ ನಿಮಗೆ ಚೆಕ್ ನ್ನು ಕೊಡುತ್ತೇನೆ ಬ್ಯಾಂಕಿನಿಂದ ಹಣ ಪಡೆದುಕೊಳ್ಳಿರಿ ಅಂತಾ ಹೇಳಿ ನೀವು ನಿಮ್ಮ ಖಾತೆ ಇರುವ ಎಸ್ ಬಿ ಆಯ್ ಶಾಖಾ ಕುಮಟಾ ಇದರ ಚೆಕ್ ನಂ . 132111 ರೂ. 46,996/- ದಿಃ 19-04-2021 ನೇದನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 8** ಪಿಡಬ್ಲ್ಯೂ 1 – ಇವರು ಮುಂದುವರಿದು , ಸದರ ಚೆಕ್ ನ್ನು ಅವರ ಸಹಕಾರಿಯವರು ನಿಮ್ಮ ಮಾತಿನ ಮೇರೆಗೆ ಕಲೆಕ್ಷನ್ ಕುರಿತು ಅವರ ಬ್ಯಾಂಕರರಾದ ಆಯ್ ಸಿ ಆಯ್ ಸಿ ಐ ಬ್ಯಾಂಕ ಕುಮಟಾ ಇದಕ್ಕೆ ಹಾಜರು ಪಡಿಸಿದಾಗ ಸದರ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಕಾರಣದಿಂದ ನಗದೀಕರಣವಾಗದೇ ಮರಳಿ ಬಂದಿದ್ದು ಸದರಿ ವಿಷಯವನ್ನು ಬ್ಯಾಂಕರರು ದಿಃ 09-06-2021 ರಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 9** ಪಿಡಬ್ಲ್ಯೂ 1 – ಇವರು ಮುಂದುವರಿದು, ಕಾರಣ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಡದೇ ವ ವ್ಯವಸ್ಥೆ ಮಾಡದೇ ಚೆಕ್ ನೀಡುವುದು ಎನ್ ಆಯ್ ಎಕ್ಟ ರನ್ವಯ ಧಂಡನೀಯ ಅಪರಾಧವಾಗಿರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 10** ಪಿಡಬ್ಲ್ಯೂ 1 – ಇವರು ಮುಂದುವರಿದು, ಸದರ ಸಾಲದ ರಖಂನ್ನು ವಸೂಲ ಕೊಡಲು ನೀವು ಜವಾಬುದಾರರಿರುತ್ತೀರಿ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 11** ಪಿಡಬ್ಲ್ಯೂ 1 – ಇವರು ಮುಂದುವರಿದು, ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬುದನ್ನು ತಿಳಿದೂ ತಿಳಿದು ಬುಧ್ಯಾ ಪೂರ್ವಕವಾಗಿ ನೀವು ಅವರ ಸಹಕಾರಿಗೆ ಕೊಡತಕ್ಕ ರಖಂನ್ನು ಕೊಡದೇ ತಪ್ಪಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಅವರ ಸಹಕಾರಿಗೆ ಬೋಗಸ್ ಚೆಕ್ ನೀಡಿ ಧಂಡನೀಯ ಅಪರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 12** ಪಿಡಬ್ಲ್ಯೂ 1 – ಇವರು ಮುಂದುವರಿದು, ಕಾರಣ ಈ ಕುರಿತು ಅವರು ಅವರ ವಕೀಲರ ಮೂಲಕ ದಿಃ 21-06-2021 ರಂದು ನೋಂದಾಯಿತ ಅಂಚೆ ನೋಟಿಸು ಕೊಡಿಸಿ ಸದರಿ ನೋಟಿಸು ಜ್ಯಾರಿಯಾದ 15 ದಿವಸಗಳ ಒಳಗೆ ಸದರ ಚೆಕ್ ರಖಂನ್ನು ವಸೂಲ ಕೊಡಿಸುವಂತೆ ಮಾಗಣಿ ನಿಮಗೆ ಕಳುಹಿಸಿದ ನೋಟಿಸು ನಿಮಗೆ ದಿಃ 22-06-2021 ರಂದು ಜ್ಯಾರಿಯಾದಾಗ್ಯೂ ಸ್ವೀಕರಿಸದೇ ವ ಸದರ ನೋಟಿಸಿಗೆ ಉತ್ತರ ನೀಡಿದ್ದಾಗಲೀ , ಚೆಕ್ ರಖಂ ವಸೂಲ ನೀಡಿದ್ದಾಗಲೀ ಇರುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 13** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

**ಪ್ರಶ್ನೆ – 14** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 03-07-2025.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ